ಕಾನೂನು ಕಣ್ಣು

**ಮಕ್ಕಳ ಜಗತ್ತು ಮುಗ್ಧವಾದದ್ದು. ಆ ಮುಗ್ಧತೆಯನ್ನೇ ದುರುಪಯೋಗಪಡಿಸಿಕೊಂಡು ಅವರ ಮೇಲೆ 'ದೊಡ್ಡವರು' ನಡೆಸುವ ಅಮಾನವೀಯ ಕ್ರೌರ್ಯಗಳಿಗೆ ಕಾನೂನಿನ ತಡೆ ಇಲ್ಲವೇ?**



# ಹೂಮನಸಿನ ಮೇಲೆ ಮುಳ್ಳಿನ ಗೀರು

■ ಸೌಮ್ಯಲಕ್ಷ್ಮೀ ಕುಕ್ಕಜೆ, ನ್ಯಾಯವಾದಿ

ಒಬ್ಬರು ಆಪ್ತಸಮಾಲೋಚಕರ ಬಳಿ, 12 ವರ್ಷದ ತಮ್ಮ ಮಗಳನ್ನು ಕರೆದುಕೊಂಡು ಆಕೆಯ ಪೋಷಕರು ಬಂದರು. ಆ ಮಗುವಿಗೆ ಕೆಲವೊಮ್ಮೆ ಉಚ್ಚೆ ತಡೆಹಿಡಿಯಲು ಆಗುತ್ತಿರಲಿಲ್ಲ. ಎಲ್ಲೆಂದರಲ್ಲಿ ಹಾಗೆಯೇ ಮೂತ್ರ ವಿಸರ್ಜನೆ ಮಾಡಿಬಿಡುತ್ತಿದ್ದಳು. ಆಕೆಯನ್ನು ವೈದ್ಯರ ಬಳಿ ಕರೆದುಕೊಂಡು ಹೋದಾಗ, ಅವರು ಪರೀಕ್ಷೆ ಮಾಡಿ, ಮಗುವನ್ನು ಮನೋವೈದ್ಯರಲ್ಲಿ ತೋರಿಸುವಂತೆ ಹೇಳಿದರು. ಪೋಷಕರಿಗೆ ನೆಲವೇ ಕುಸಿದಂತೆ ಆಗಿತ್ತು. ಆ ಮಗು ಸಹಜವಾಗಿಯೇ ಇದ್ದಳು; ಮೇಲ್ನೋಟಕ್ಕೆ ಯಾವುದೇ ತೊಂದರೆ ಇರಲಿಲ್ಲ. ಎಲ್ಲರಂತೆ ಸಹಜವಾಗಿ ಆಟ ಪಾಠಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಳು. ಎಲ್ಲರೊಂದಿಗೆ ಸಹಜವಾಗಿಯೇ ಮಾತಾಡುತ್ತಿದ್ದಳು. 'ಮನೋವೈದ್ಯರ ಬಳಿ ಯಾಕೆ?' ಅನ್ನುವ ಪ್ರಶ್ನೆ ಪೋಷಕರನ್ನು ಕಾಡಿತು. ಹಲವರಂತೆ ಅವರಿಗೂ, ಮನೋವೈದ್ಯರ ಬಳಿ ಹೋಗುವುದೆಂದರೆ ಅವಮಾನದ ವಿಷಯವಾಗಿತ್ತು. 'ನೋಡಿದವರು ಏನು ಹೇಳಿಯಾರು' ಎಂಬ ಆತಂಕ ಬೇರೆ. ಆದರೂ ಕರೆದುಕೊಂಡು ಬಂದಿದ್ದರು.

ಆಕೆ ಇನ್ನೂ ಚಿಕ್ಕವಳಿದ್ದಾಗ ಅವರ ಮನೆಗೆ ಬಂದಿದ್ದ ಒಬ್ಬ ಸಂಬಂಧಿಕನಿಂದ ಲೈಂಗಿಕ ಕಿರುಕುಳಕ್ಕೆ ಒಳಗಾಗಿದ್ದಳೆಂಬ ಸತ್ಯ, ಕೆಲವು ಬಾರಿಯ ಮಾತುಕತೆಯ ನಂತರ ಆಪ್ತಸಮಾಲೋಚಕರಿಗೆ